**ಎಮ್. ವಿ. ಸಿ. 609/2024**
**ಪಿ.ಡಬ್ಲ್ಯು 02**

**ಸಾಕ್ಷಿಯನ್ನು ಇಂದು ದಿಃ 07.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎಚ್.ಬಿ.ಎಸ್., ವಕೀಲರಿಂದ ಅರ್ಜಿದಾರರ ಪರವಾಗಿ.**

ಈ ದಿನ ನನ್ನ ಮುಖ್ಯ ಪರೀಕ್ಷೆಯ ಸಲುವಾಗಿ ಪ್ರಮಾಣೀಕರಿಸಿದ ಪ್ರಮಾಣಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ನನ್ನ ಹೇಳಿಕೆಯ ಪ್ರಕಾರ ಬರೆಯಲಾಗಿದ್ದು, ಅವುಗಳನ್ನು ಓದಿ ತಿಳಿದುಕೊಂಡು, ಅದಕ್ಕೆ ನನ್ನ ಸಹಿ ಮಾಡಿದ್ದೇನೆ.

ನಾನು ಈ ದಿನ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಅರ್ಜಿದಾರರಿಗೆ ಸಂಬಂಧಪಟ್ಟ ಒಂದು ನ್ಯೂನ್ಯತಾ ಪ್ರಮಾಣಪತ್ರವನ್ನು ನಿ.ಪಿ.49 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.49(ಎ) ಎಂದು ಗುರುತಿಸಲಾಯಿತು.

ಎರಡು ಎಕ್ಸರೇ ವರದಿಗಳನ್ನು ಕ್ರಮವಾಗಿ ನಿ.ಪಿ.50 ಮತ್ತು 51 ಎಂದು ಗುರುತಿಸಲಾಯಿತು.

ಎರಡು ಎಕ್ಸರೇ ಫಿಲ್ಮಗಳನ್ನು ಒಟ್ಟಾಗಿ ನಿ.ಪಿ.52 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಬಿ.ಕೆ., ವಕೀಲರಿಂದ**

1) ನಾನು ಅರ್ಜಿದಾರರಿಗೆ ಅಪಘಾತವಾದ ನಂತರ ಅವರನ್ನು ಪರೀಕ್ಷಿಸಿರುವುದಿಲ್ಲ ಮತ್ತು ಚಿಕಿತ್ಸೆ ಕೊಟ್ಟಿರುವುದಿಲ್ಲ. ಅಪಘಾತವಾದ ನಂತರ ಎರಡು ವರ್ಷಗಳ ನಂತರ ನಾನು ಅವರನ್ನು ಪರೀಕ್ಷಿಸಿದ್ದೇನೆ ಎಂದರೆ ನಿಜ.

ಅರ್ಜಿದಾರನು ಗಾಯದ ಪ್ರಮಾಣಪತ್ರ, ಡಿಸ್ಚಾರ್ಜ ಸಮರಿ ಮತ್ತು ಕೇಸ್ ಶೀಟ ಹಾಜರುಪಡಿಸಿರುತ್ತಾನೆ. ಅರ್ಜಿದಾರನು ಚಿಕಿತ್ಸೆಗೆ ಸರಿಯಾಗಿ ಸ್ಪಂದಿಸಿರುತ್ತಾನೆ ಎಂದರೆ ನಿಜ.

2) ಅಪಘಾತವು ದಿನಾಂಕ 13.01.2024 ರಂದು ಆಗಿರುತ್ತದೆ. ಕೇಸ್ ಶೀಟಿನಲ್ಲಿ ಅರ್ಜಿದಾರನಿಗೆ ಮುಂದುವರೆದ ಚಿಕಿತ್ಸೆ ನೀಡಿದ ಬಗ್ಗೆ ಉಲ್ಲೇಖವಿರುವುದಿಲ್ಲ. ಅರ್ಜಿದಾರನು ಅಪಘಾತವಾದಾಗಿನಿಂದ ನನ್ನ ಬಳಿ ನ್ಯೂನ್ಯತಾ ಪ್ರಮಾಣಪತ್ರ ಪಡೆದುಕೊಳ್ಳಲು ಬರುವುದಕ್ಕಿಂತ ಮೊದಲು ಮಿರಜ ಆಸ್ಪತ್ರೆಯಲ್ಲಿ ಅಥವಾ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ. ಅವನಿಗೆ ಆದ ಗಾಯಗಳು ಸಂಪೂರ್ಣವಾಗಿ ಗುಣಮುಖವಾಗಿರುತ್ತವೆ ಎಂದರೆ ನಿಜ.

3) ಅರ್ಜಿದಾರನಿಗೆ ಎಕ್ಸರೇ ಮಾಡಿಸಿರುತ್ತಾರೆ. ಆತನ ಎಕ್ಸರೇ ವರದಿಯಲ್ಲಿ ಯಾವುದೇ ಅಸಾಮಾನ್ಯತೆ ಕಂಡುಬಂದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಆದರೆ ಮೂಳೆಮುರಿತವಾದ ಬಗ್ಗೆ ಮತ್ತು ಇಂಪ್ಲ್ಯಾಂಟ ಇರುವ ಬಗ್ಗೆ ನಮೂದು ಮಾಡಿರುತ್ತಾರೆ. ದೇಹದಲ್ಲಿ ಇಂಪ್ಲ್ಯಾಂಟ ಇರುವುದರಿಂದ ಚಲನವಲನಕ್ಕೆ ತೊಂದರೆ ಇರುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಪ್ರಮಾಣದಲ್ಲಿರುತ್ತದೆ ಎಂದು ಹೇಳುತ್ತಾರೆ. ಅರ್ಜಿದಾರನು ಏನು ಕೆಲಸ ಮಾಡುತ್ತಿದ್ದ ಎಂದು ವಿಚಾರಣೆ ಮಾಡಿರುತ್ತೇನೆ. ಆತನು ವ್ಯವಸಾಯ ಮಾಡುತ್ತಾನೆ.

4) ಅವನಿಗೆ ಆದಂತಹ ನ್ಯೂನ್ಯತೆ ಯಾವ ಕೆಲಸಕ್ಕೆ ತೊಂದರೆ ಉಂಟು ಮಾಡುತ್ತದೆ ಎಂದು ನಮೂದು ಮಾಡಿರುವುದಿಲ್ಲ. ನಾನು ನಮೂದು ಮಾಡಿರುವ ನ್ಯೂನ್ಯತಾ ಪ್ರಮಾಣವು ನಿರ್ದಿಷ್ಟ ಅಂಗಕ್ಕೆ ಇರುತ್ತದೆ ಎಂದರೆ ನಿಜ. ಇಡೀ ದೇಹಕ್ಕೆ ಹೋಲಿಸಿದರೆ ನ್ಯೂನ್ಯತಾ ಪ್ರಮಾಣವು ಕಡಿಮೆಯಾಗುತ್ತದೆ ಎಂದರೆ ನಿಜ.

**ಎಮ್. ವಿ. ಸಿ. 609/2024**
**ಪಿ.ಡಬ್ಲ್ಯೂ 02**

5) ನಾನು ಅರ್ಜಿದಾರನನ್ನು ದೈಹಿಕವಾಗಿ ಪರೀಕ್ಷೆಗೆ ಒಳಪಡಿಸಲಾರದೇ ಆತನ ಕೋರಿಕೆಯ ಮೇರೆಗೆ ಸುಳ್ಳು ನ್ಯೂನ್ಯತಾ ಪ್ರಮಾಣಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ಆತನನ್ನು ದೈಹಿಕವಾಗಿ ಪರೀಕ್ಷೆ ಮಾಡಿರುತ್ತೇನೆ ಎಂದು ತೋರಿಸಲು ನ್ಯೂನ್ಯತಾ ಪ್ರಮಾಣಪತ್ರದಲ್ಲಿ ಅರ್ಜಿದಾರನ ದೈಹಿಕ, ವೈಯಕ್ತಿಕ ಗುರುತಿನ ಚಿಹ್ನೆಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ,

4 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು ಮತ್ತು
ಸದಸ್ಯರು ಎಂ.ಎ.ಸಿ.ಟಿ. ನಂ.13, ವಿಜಯಪುರ